2. Notification No. RD 61 TRM 83 dated 16th January 1984.

Remission of land revenue in respect of 22 villages of Chikodi Taluk for the year 1982-1983.

3. Notification No. RD 68 TRM 83 dated 16th January 1984.

Remission of land revenue in respect of 18 villages of Byadgi Taluk for the year 1977-1978.

4. Notification No. RD 72 TRM 83 dated 16th January 1984.

Remission of land revenue in respect of 44 villages of Kalghatgi Taluk for the year 1977-1978.

5. Notification No. RD 73 TRM 83 dated 16th January 1984.

Remission of land revenue in respect of 16 village of Kalghatgi Taluk for the year 1978-1979.

6. Notification No. RD 74 TRM 83 dated 16th January 1984.

Remission of land revenue in respect of 24 villages of Shirahatti Taluk for the year 1979-1980.

as rqeuired under sub-section 2 of Section 194 of the Kaenataka Land Revenue Act, 1964.

MR. SPEAKER.—Papers laid.

ಮನವಿಗಳು

ಅಧ್ಯಕ್ಷರು.—ನಿನ್ನೆಯ ದಿವಸ ನಡೆದಂಥ ಘಟನೆಯ ಬಗ್ಗೆ ನಿಲುವಳಿ ಸೂಚನೆ ಬಂದಿದೆ, ನಿಯಮ ೫೫ಳ ರ ಪ್ರಕಾರ ನೋಟಿಸ್ ಬಂದಿದೆ. ಮಾನ್ಯ ಚಿಕ್ಕೇಗೌಡರು ೫೫ಳರ ಪ್ರಕಾರ ನೋಟಿಸ್ ಕಳುಹಿಸಿದ್ದಾರೆ.

ಶ್ರೀ ಎನ್. ಚಿಕ್ಕೇಗೌಡ.—ಅಧ್ಯಕ್ಷರೇ, ನಾನು ಅಡ್ಜರ್ನ್‌ಮೆಂಟ್ ಮೋಷನ್ ಕಳುಹಿಸಿದ್ದೇನೆ.

ಅಧ್ಯಕ್ಷರು.—ನಾನು ಅವುಗಳನ್ನು ಗಮನದಲ್ಲಿಟ್ಟುಕೊಂಡು ೫೫ಳಿಕ್ಕೆ ಬದಲಾವಣೆ ಮಾಡಿದ್ದೇನೆ. ಈಗ ಮಾನ್ಯ ಮಂಬ್ಯಿ ಮಂತ್ರಿಗಳು ಹೇಳಿಕೆ ಕೊಡುತ್ತಾರೆ.

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೆ, ಅವಕಾಶ ಮಾಡಿಕೊಟ್ಟರೆ ಕೆಲವು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡುತ್ತೇನೆ,

ಅಧ್ಯಕ್ಷರು.—ನಿಲುವಳಿ ಸೂಚನೆ ೫೫ಳಿಕ್ಕೆ ಬದಲಾಯಿಸಿದ್ದೇನೆ. ಈಗ ಮಾನ್ಯ ಮಂಬ್ಯಿ ಮಂತ್ರಿಗಳು ಹೇಳಿಕೆ ಕೊಡುತ್ತಾರೆ. ಆನಂತರ ತಾವು ಹೇಳಿ.

ಶ್ರೀ ಎಂ. ವೀರಪ್ಪಮೊಯಿಲಿ.—ಅಧ್ಯಕ್ಷರೆ, ಮಾನ್ಯ ಮಂಬ್ಯಿ ಮಂತ್ರಿಗಳು ಹೇಳಿಕೆ ಕೊಡುವುದು ಇದ್ದರೆ ಸಾವಧಾನದಿಂದ ಕುಳಿತುಕೊಂಡು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೆ, ಮಾನ್ಯ ಮಂಬ್ಯಿ ಮಂತ್ರಿಗಳು ಹೇಳಿಕೆ ಕೊಡುವ ಬಗ್ಗೆ ಅಭ್ಯಂತರ ಇಲ್ಲ. ಅವರು ಹೇಳಿಕೆ ಕೊಡುವುದಕ್ಕೆ ಮುಂಚೆ.....

ಅಧ್ಯಕ್ಷರು.—ಅವರು ಹೇಳಿಕೆ ಕೊಟ್ಟಮೇಲೆ ತಪ್ಪಗೆ ಅವಕಾಶ ಕೊಡುತ್ತೇನೆ.

ಶ್ರೀ ವಿ. ಧನಂಜಯಕುಮಾರ್.—ಅಧ್ಯಕ್ಷರೇ, ನಾನು ಬೆಳಿಗ್ಗೆ ಒಂಭತ್ತು ಗಂಟೆಗೆ ನೋಟಿಸ್ ಕಳುಹಿಸಿಕೊಟ್ಟಿದ್ದೇನೆ. ಪ್ರಥಮ ಪ್ರಶಸ್ತ ನೆಮಗೆ ಕೊಡಬೇಕು.

ಅಧ್ಯಕ್ಷರು.—ನನ್ನಲ್ಲಿರುವ ಪಟ್ಟಿಯಲ್ಲಿ ತಮ್ಮ ಹೆಸರು ಇದೆ. ತಮಗೆ ಹೇಳಬೇಕೆಂದರೆ, ಮಾನ್ಯ ಡಾ. ವಿ ಎಸ್ ಆಚಾರ್ಯ ಅವರು ಮಾನ್ಯ ಯಡಿಯೂರಪ್ಪನವರು, ಈ ಬೆಂಗಳೂರು ಬಂದ್ ಬಗ್ಗೆ ಕಳುಹಿಸಿಕೊಟ್ಟಿದ್ದಾರೆ. ಈ ಮಧ್ಯೆ ರಾಮ್‌ದೇವ್ ಅವರು ಕಳುಹಿಸಿದ್ದಾರೆ. ಯಡಿಯೂರಪ್ಪ, ಬಂಗರಾಪ್ಪನವರು ನಿಲುವಳಿ ಸೂಚನೆ ಕಳುಹಿಸಿದ್ದಾರೆ. ತಮ್ಮ ಹೆಸರು ಬಿಟ್ಟು ಹೋಗಿಲ್ಲ. ತಾವೆಲ್ಲಾ ಕಳುಹಿಸಿರತಕ್ಕದ್ದನ್ನೇ ಪಟ್ಟಿ ಮಾಡಿ ತಂದಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರ್ಯೇ ಡಾಕ್ಟರ್ ರಾಜ್‌ಕುಮಾರ್ ಅಭಿಮಾನಿಗಳ ಸಂಘದವರು ಕೊಟ್ಟ ಕರೆಯ ಮೇರೆಗೆ ನೆನ್ನೆಯ ದಿವಸ.....

ಶ್ರೀ ಜೆ. ಮಾದೇಗೌಡ.—ಅಧ್ಯಕ್ಷರೇ, ಪಾಯಿಂಟ್ ಆಫ್ ಆರ್ಡರ್. ಈ ಕಡೆಯ ಕೆಲವು ಸದಸ್ಯರು ನಿಲುವಳಿ ಸೂಚನೆಯ ಬಗ್ಗೆ ನೋಟಿಸ್ ಕೊಟ್ಟಿದ್ದಾರೆ. ಅದರ ಪ್ರಕಾರ ಪ್ರಸ್ತಾಪ ಮಾಡುವುದಕ್ಕೆ ಮುಂಚೆ ಮಾನ್ಯ ಮುಖ್ಯ ಮಂತ್ರಿಗಳು ಹೇಳಿಕೆ ಕೊಟ್ಟರೆ, ನಿಲುವಳಿ ಸೂಚನೆಯು ಹಕ್ಕನ್ನು ಕಸಿದುಕೊಂಡ ಹಾಗೆ ಆಗುತ್ತದೆಂದು ನನ್ನ ಅಭಿಪ್ರಾಯ.

ಅಧ್ಯಕ್ಷರು.—ನಾನು ಮೊದಲೆ ಹೇಳಿದ್ದೇನೆ. ನಿಲುವಳಿ ಸೂಚನೆ ಆಗುವುದಿಲ್ಲ ಎಂದು ನಾನೇ ತೀರ್ಮಾನ ತೆಗೆದು ಕೊಂಡು ನಿಯಮ ೫೫ಕ್ಕೆ ಬದಲಾವಣೆ ಮಾಡಿದ್ದೇನೆ.

ಶ್ರೀ ಜೆ. ಮಾದೇಗೌಡ.—ಅಧ್ಯಕ್ಷರೇ, ನಿಲುವಳಿ ಸೂಚನೆ ಆಗುವುದಿಲ್ಲ ಎಂಬ ಅಭಿಪ್ರಾಯಕ್ಕೆ ಹೇಗೆ ಬಂದಿರಿ.

ಶ್ರೀ ಜೆ. ಡಿ. ಸೋಮಪ್ಪ.—ಏತಕ್ಕೆ ಬದಲಾವಣೆ ಆಯಿತೊ ಗೊತ್ತಾಗಲಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ಅಧ್ಯಕ್ಷರೆ, ಡಾಕ್ಟರ್ ರಾಜ್‌ಕುಮಾರ್.....

ಶ್ರೀ ಜೆ. ಮಾದೇಗೌಡ.—ಅಧ್ಯಕ್ಷರೆ, ನಾನು ತಮ್ಮಿಂದ ನಿಖರವಾದ ಉತ್ತರ ಬಯಸುತ್ತೇನೆ.

I want a ruling on this point.

MR. SPEAKER.—I have ruled it out.

ಶ್ರೀ ಜೆ. ಮಾದೇಗೌಡ.—ಅಧ್ಯಕ್ಷರೆ, ನಿಲುವಳಿ ಸೂಚನೆ ಆಗುವುದು ಇದ್ದರೂ, ಇದು ಆಗುವುದಿಲ್ಲ ಎಂದು ತೀರ್ಮಾ ಹೇಳುವುದಾದರೆ ಏತಕ್ಕೆ ನಾವು ಕಳುಹಿಸಬೇಕು. ಇನ್ನು ಮುಂದೆ ನಿಲುವಳಿ ಸೂಚನೆ ಕಳುಹಿಸುವುದು ಬೇಡವೇ ?

ಅಧ್ಯಕ್ಷರು.—ಆ ರೀತಿ ತೀರ್ಮಾನ ತೆಗೆದುಕೊಳ್ಳತಕ್ಕ ಅಧಿಕಾರ ನನಗೆ ಇದೆ. ಆ ಪ್ರಕಾರ ತೆಗೆದು ಕೊಂಡಿದ್ದೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೇ. ಈ ಮನೆಯ ಇಪ್ಪತ್ತು ವರ್ಷದ ಕಾರ್ಯ ಕಲಾಪಗಳ ವರದಿಯನ್ನು ತಾವು ತರಿಸಿ ನೋಡಿದರೆ ಅರ್ಥವಾಗುತ್ತದೆ. ನಿಲುವಳಿ ಸೂಚನೆ ಅಥವಾ ಶೂನ್ಯವೇಳೆಯಲ್ಲಿ ಎತ್ತಬೇಕಾದ ವಿಷಯದ ಬಗ್ಗೆ, ನೋಟಿಸ್ ಬಂದಿದ್ದರೂ ಸರ್ಕಾರದ ಪರವಿಂದ ತಾವಾಗಿಯೇ ಒಂದು ಹೇಳಿಕೆಯನ್ನು ಕೊಡುತ್ತೇವೆಂದು ಸೂಚನೆ ಬಂದರೆ, ಅದಕ್ಕೆ ಮೊದಲನೇ ಪ್ರಾಶಸ್ತ್ಯ ಸಿಕ್ಕಬೇಕು. ಇದು ನಮ್ಮ ಈ ಮನೆಯ ಪರಂಪರೆ ಸರ್ಕಾರ ತಾನಾಗಿಯೇ ಒಂದು ಹೇಳಿಕೆ ಕೊಡಲಿಕ್ಕೆ ಮುಂದೆ ಬಂದಾಗ ನಿಲುವಳಿ ಸೂಚನೆ, ಅಥವಾ ನಿಯಮ ೫೫ರ ಪ್ರಕಾರ ಮೊದಲು ತೆಗೆದುಕೊಳ್ಳಬೇಕೆಂದು ಹೇಳಿದರೆ ಅರ್ಥವಾಗುವುದಿಲ್ಲ.

ಶ್ರೀ ಜೆ. ಮಾದೇಗೌಡ.—ನಾನು ಸರ್ಕಾರದವರು ಉತ್ತರ ಕೊಡುವುದನ್ನು ಒಪ್ಪುತ್ತೇನೆ. ಅದು ಏನಾಗುತ್ತದೆ, ಮಾನ್ಯಸದಸ್ಯರು ಹೇಳುವಂತಾದ್ದು ಊಹೆ ಮಾಡಿಕೊಂಡು ಉತ್ತರ ಕೊಟ್ಟ ಹಾಗೆ ಆಗುತ್ತದೆ. ನೀವು ಉತ್ತರ ಕೊಟ್ಟಮೇಲೆ ನಮ್ಮ ಕರ್ತವ್ಯ ಏನು ? ನಾವು ಕ್ಲಾರಿಫಿಕೇಷನ್ ಕೇಳ ಅಥವಾ ಭಾಷಣ ಮಾಡಲಿಕ್ಕೆ ಅವಕಾಶ ಕೊಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ನಿಲುವಳಿ ಸೂಚನೆ ಕಳುಹಿಸಿದರೆ ಭಾಷಣ ಮಾಡಲಿಕ್ಕೆ ಅವಕಾಶ ಇದೆಯೇ ?

ಶ್ರೀ ಜೆ. ಮಾದೇಗೌಡ.—ವಿಷಯವನ್ನು ಪ್ರಸ್ತಾಪ ಮಾಡಲಿಕ್ಕೆ ಅವಕಾಶ ಇದೆ.

ಅಧ್ಯಕ್ಷರು —ಸಭಾನಾಯಕರು ಉತ್ತರ ಹೇಳುವಾಗ ಪ್ರಿಯಾರಿಟಿ ಕೊಡಬೇಕು. ಮಾನ್ಯ ಸದಸ್ಯರಾದ ಮಾದೇಗೌಡರ ಕ್ರಿಯಾಲೋಪವನ್ನು ತಳ್ಳಿಹಾಕಿದ್ದೇನೆ. ದಯವಿಟ್ಟು ಕಳಿತುಕೊಳ್ಳಬೇಕು.

ಶ್ರೀ ಎಂ. ವೀರಪ್ಪಮೊಯಿಲಿ —ಮಾನ್ಯ ಮುಖ್ಯ ಮಂತ್ರಿಗಳೇ ಉತ್ತರ ಹೇಳಲಿ.

೧೨ ಪೂರ್ವಾಹ್ನ

ಮಾನ್ಯ ಅಧ್ಯಕ್ಷರೆ, ತಾವೂ ಈಗತಾನೇ ಬಂದಿದ್ದೀರಿ, ನಾವೂ ಈಗತಾನೇ ಬಂದಿದ್ದೇವೆ ಈಗಲೇ ಕಾವು ತಾಳ್ಮೆಯನ್ನು ಕಳೆದುಕೊಳ್ಳಬೇಡಿ ನಾವು ಹೇಳುವುದನ್ನು ಕೇಳಿದರೆ ಒಳ್ಳೆಯದು ಮಾನ್ಯ ಸದಸ್ಯರಾದ ಮಾದೇಗೌಡರು ಎತ್ತಿದ ಪ್ರಶ್ನೆಯಾದರೂ ಇಷ್ಟೆ, ನಿಲುವಳಿ ಸೂಚನೆಯನ್ನು ನಾವು ಕಳುಹಿಸಿದ್ದೇವೆ. ಆದರೆ ನಾವು ಕಳುಹಿಸಿದ್ದು, ನಿಲುವಳಿ ಸೂಚನೆ ಆಗುವುದಿಲ್ಲವೆಂದು ಯಾಂತ್ರಿಕವಾಗಿ ಹೇಳಿದ್ದೀರಿ. ಮೊನ್ನೆ ಕೂಡ ಇದೇರೀತಿ ನಡೆಯಿತು ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ತನ್ನ ಹೇಳಿಕೆಯನ್ನು ಕೊಡುತ್ತೇವೆಂದು ಹೇಳುತ್ತಿರುವುದರಿಂದ ನಾವು ಅವನ್ನು ಚರ್ಚಿಸಿಕೊಳ್ಳುತ್ತೇವೆ. ಆದರೆ ನಾವು ಕಳುಹಿಸಿದ ವಿಷಯವನ್ನು ನಿಯಮ ೫೫ಳಿಕ್ಕೆ ಕನ್ವರ್ಟ್ ಮಾಡಿದ್ದೇವೆಂದು ತಾವು ಹೇಳುವುದಾದರೆ 'ನಿಲುವಳಿ ಸೂಚನೆ' ಎನ್ನುವ ಕಲಂ ಏನಿದೆ ಅದನ್ನು ತೆಗೆದುಹಾಕುವುದು ಒಳ್ಳೆಯದು ಏಕೆಂದರೆ ನಾವು ಕಳುಹಿಸಿದ ವಿಷಯದ ಬಗ್ಗೆ ಮಾತನಾಡಲು ನಮಗೆ ತಾವು ಅವಕಾಶವನ್ನು ಕೊಡದಿದ್ದರೆ ಇನ್ನು ಮುಂದೆ ಈ ಕಲಂನ್ನೇ ತೆಗೆದುಹಾಕಿ. ನಾವು ಕಳುಹಿಸಿದ ವಿಷಯವನ್ನು ಯಾವ ನಿಯಮಕ್ಕೆ ಪರಿವರ್ತನೆ ಮಾಡುತ್ತೀರಿ ಎನ್ನುವ ಬಗ್ಗೆ ತಮ್ಮನ್ನು ತಾವು ನಮ್ಮ ಛೇಂಬರ್‌ಗೂ ಕರೆಯುವುದಿಲ್ಲ. ನಾವು ನಿಲುವಳಿ ಸೂಚನೆಯೆನ್ನು ಕಳುಹಿಸುವಾಗ ಬಹಳ ಜವಾಬ್ದಾರಿಯುತವಾಗಿ ಯೋಚನೆ ಮಾಡಿ ಕಳುಹಿಸಿರುತ್ತೇವೆ. ಆದರೆ ಇಲ್ಲಿ ನಾವು ನಮ್ಮ ರೂಲಿಂಗ್‌ನ್ನು ಪ್ರಶ್ನೆ ಮಾಡುತ್ತಿಲ್ಲ. ಮಾನ್ಯ ಸದಸ್ಯರಾದ ಮಾದೇಗೌಡರು ಒಂದು ಪ್ರಶ್ನೆಯನ್ನು ಬಹಳ ಕಳಕಳಿಯಿಂದ ಕೇಳಿದ್ದಾರೆ. ಮಾನ್ಯ ಮಾದೇಗೌಡರು ಈ ಮೂಲಭೂತ ಪ್ರಶ್ನೆಯನ್ನು ಎತ್ತಿದ್ದಾರೆ ನಾವು ಎಲ್ಲಾಕ್ಕೂ ನಿಲುವಳಿ ಸೂಚನೆಯನ್ನು ಕಳುಹಿಸುವುದಿಲ್ಲ ನಾವು ಪ್ರತಿದಿನ ೧೫ ನಿಮಿಷಕಾಲ ಮುಂಚಿತವಾಗಿ ಇಲ್ಲಿಗೆ ಬಂದಿರುತ್ತೇವೆ. ಆಗ ತಾವು ನಮ್ಮನ್ನು ಕರೆದು ಒಂದು ಮಾತು ಕೇಳಬಹುದು. ಆಲ್ಲಿ ತಾವು ಕೇಳುವ ಮಾತಿಗೆ ಒಪ್ಪಿ ತಲೆಬಾಗಿ ಕೂತುಕೊಳ್ಳುತ್ತೇವೆ. ಆದರೆ ಈರೀತಿ ಇದು ಈ ನಿಯಮದ ಕೆಳಗೆ ಬರುವುದಿಲ್ಲವೆಂದು ಯಾಂತ್ರಿಕವಾಗಿ ಹೇಳುವುದಾದರೆ ಇದರ ಅರ್ಥ ಏನು ? ನಾವು ನಮ್ಮಲ್ಲಿರತಕ್ಕ ಕಳಕಳಿಯನ್ನು ನಿವೇದಿಸಿದ್ದೇವೆ.

ಶ್ರೀ ಜಿ. ಮಾದೇಗೌಡ —ಮಾನ್ಯ ಅಧ್ಯಕ್ಷರೆ, ನನ್ನ ಆಕ್ಷೇಪವಾದರೂ ಇಷ್ಟೆ ಈ ನಿಲುವಳಿ ಸೂಚನೆ ಎನ್ನುವ ರೂಲ್ ಏನಿದೆ ಇದರ ಗಂಭೀರತೆಯನ್ನು ಅರಿತು ವಿಷಯವನ್ನು ಪ್ರಸ್ತಾಪಮಾಡುವುದಕ್ಕೆ ನಮಗೆ ಇರತಕ್ಕ ಅಧಿಕಾರವನ್ನು ತಾವು ಕಿತ್ತುಕೊಂಡಿರುತ್ತಿದ್ದೀರಿ ವಿಷಯಗಳನ್ನು ನಿಯಮಗಳಿಗನುಸಾರವಾಗಿ ಪರಿವರ್ತನೆ ಮಾಡುವುದಕ್ಕೆ ತಮಗೆ ಅಧಿಕಾರ ಇದೆ. ಅದೇರೀತಿ ಮಾನ್ಯ ಮಂತ್ರಿಗಳು ತಮ್ಮ ಹೇಳಿಕೆಯನ್ನು ಕೊಡುವುದಕ್ಕೂ ಕೂಡ ಅಧಿಕಾರ ಇದೆ.

ಶ್ರೀ ಹೆಚ್. ಪಿ. ಶ್ರೀಕಂಠಯ್ಯ —ಮಾನ್ಯ ಅಧ್ಯಕ್ಷರೆ, ಮಾನ್ಯ ಸಭಾ ನಾಯಕರು ಉತ್ತರ ಕೊಡುವುದರಲ್ಲಿ ಯಾವ ಆಭ್ಯಂತರವೂ ಇಲ್ಲ. ಆದರೆ ನಮ್ಮ ಕೇಳುವುದಕ್ಕೆ ಮುಂಚಿತವಾಗಿಯೇ ತಾವು ಇದನ್ನು ತಮ್ಮ ಛೇಂಬರ್‌ನಲ್ಲಿ ತಳ್ಳಿಹಾಕಿದರೆ ಏನು ಪ್ರಯೋಜನ ?

ಅಧ್ಯಕ್ಷರು —ಆ ಒಂದು ಅಧಿಕಾರವನ್ನು ನಾವು ನನಗೆ ಕೊಟ್ಟಿದ್ದೀರಿ. ನಾನು ಸಭೆಯ ಕಾರ್ಯ ಕಲಾಪಗಳನ್ನು ನಿಭಾಯಿಸುವಾಗ ಸಾಧ್ಯವಾದಷ್ಟೂ ಎಲ್ಲರಿಗೂ ತೃಪ್ತಿಕರವಾಗಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ. ಈಗ ಸಭೆಯ ಮುಂದೆ ಬಂದಿರತಕ್ಕ ವಿಷಯ ಬಹಳ ಗಂಭೀರವಾಗಿದೆ ೬-೭ ಜನ ಮಾನ್ಯ ಸದಸ್ಯರು ನಿಲುವಳಿ ಸೂಚನೆಯನ್ನು ಕಳುಹಿಸಿದ್ದಾರೆ, ಸುಮಾರು ೧೦-೧೨ ಜನ ಮಾನ್ಯ ಸದಸ್ಯರು ಕಳುಹಿಸಿರತಕ್ಕ ಪ್ರಸ್ತಾಪನೆ ಈಗ ನನ್ನ ಮುಂದಿದೆ. ಇದನ್ನೆಲ್ಲಾ ಅರ್ಥಮಾಡಿಕೊಂಡೇ ನಾನು ಈ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇನೆ. ತಾವು ನನಗೆ ಈ ಒಂದು ಅಧಿಕಾರವನ್ನು ಕೊಟ್ಟಿದ್ದೀರಿ ಎಂದು ತಿಳಿದುಕೊಂಡೇ ಇದನ್ನು ಮಾಡಿದ್ದೇನೆ. ಒಂಯು ವೇಳೆ ನನಗೆ ಈ ಅಧಿಕಾರ ಇಲ್ಲವೆಂದು ತಾವು ಹೇಳುವುದಾದರೆ...

ಶ್ರೀ ಎಂ. ವೀರಪ್ಪಮೊಯಿಲಿ —ಈಗ ತಮ್ಮ ಅಧಿಕಾರವನ್ನು ಯಾರು ಪ್ರಶ್ನೆ ಮಾಡಿದ್ದಾರೆ ?

ಅಧ್ಯಕ್ಷರು.—'ಯಾಂತ್ರಿಕವಾಗಿ' ಎನ್ನುವ ಪದವನ್ನು ತಾವು ಉಪಯೋಗಿಸಿದ್ದೀರಿ. Therefore, I would like to refer "Practice and procedure" It is stated that

> "Where, however, the Speaker is satisfied that the notice of an adjournment motion in prima facie inadmissible, he refuse his consent without bringing the matter before the House and member concerned is informed of the Speaker's decision."

(ಗೊಂದಲ)

ಅಧ್ಯಕ್ಷರು.—ಹಾಗಾದರೆ ನಾನು ಹೇಳುವುದಕ್ಕೆ ಇಲ್ಲಿ ಅವಕಾಶ ಇದೆಯೋ ? ಇಲ್ಲವೋ ? ನಾನು ಮಾತನಾಡುವುದಕ್ಕೆ ಅವಕಾಶ ಕೊಡುತ್ತೀರೋ ? ಇಲ್ಲವೋ ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸ್ವಾಮಿ, ನಾವು ಹೇಳುವುದನ್ನು ಕೇಳಿ ಆನಂತರ ತಾವು ತಮ್ಮ ಹೇಳಿಕೆಯನ್ನು ಕೊಡಿ ಎಂದು ಕೇಳಿಕೊಳ್ಳುತ್ತಿದ್ದೇವೆ. ಆದರೆ ತಪ್ಪಿನ್ನು ನಾವು ಇಲ್ಲಿ ಪ್ರಶ್ನೆ ಮಾಡುತ್ತಿಲ್ಲ.

ಅಧ್ಯಕ್ಷರು.—ಈಗಾಗಲೇ ನಾನು ಮಾನ್ಯ ಮುಖ್ಯ ಮಂತ್ರಿಗಳ ಹೆಸರನ್ನು ಕರೆದಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಸ್ವಾಮಿ, ನಾವು ಕಳುಹಿಸಿರುವ ನಿಲುವಳಿ ಸೂಚನೆಯಂನ್ನು ಏನಿದೆ ? ಏನಿಲ್ಲ ಎಂಬುದನ್ನು ಹೇಳದೇ ಅವರು ತಮ್ಮ ಹೇಳಿಕೆಯನ್ನು ಕೊಡುವುದಾದರೂ ಹೇಗೆ !

ಶ್ರೀ ಎಸ್. ಬಂಗಾರಪ್ಪ.—ಈ ನಿಲುವಳಿ ಸೂಚನೆಯನ್ನು ತಳ್ಳಿಹಾಕುವುದಕ್ಕೆ ಏನು ತೀರ್ಮಾನ ಮಾಡಿದ್ದೀರಿ ?

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರೆ, ಇವರು ಇಲ್ಲಿ ಗಲಾಟೆ ಮಾಡುವುದಕ್ಕಾಗಿಯೇ ಬಂದಿರುವಂತೆ ಕಾಣುತ್ತದೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ತಾವು ಸ್ವಲ್ಪ ಅವಕಾಶವನ್ನು ಕೊಟ್ಟರೆ ನಿಲುವಳಿ ಸೂಚನೆಗಳು ಇನ್ನೂ ಏನೇನು ಬಂದಿವೆ ಎಂಬುದನ್ನು ನೋಡಿಕೊಂಡು ಅವರು ಹೇಳಿಕೆ ಕೊಡಲು ಅನುಕೂಲವಾಗುತ್ತದೆಂದು ನಾವು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇವೆ.

ಅಧ್ಯಕ್ಷರು.—ಮೊದಲು ಮಾನ್ಯ ಮುಖ್ಯ ಮಂತ್ರಿಗಳು ಹೇಳಿಕೆಯನ್ನು ಮಾಡಲಿ, ಆದರ ಬಗ್ಗೆ ತಪಂಗೆ ಏನಾದರೂ ಅಸಮಾಧಾನವಾದರೆ ಆನಂತರ ತಾವು ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನಖಾರ್ಗೆ.—ತಾವು ಮುಂಚಿತವಾಗಿ ನಿರ್ಣಯವನ್ನು ತೆಗೆದುಕೊಂಡರೆ...

ಅಧ್ಯಕ್ಷರು.—ಈಗ ಮಾನ್ಯ ಮುಖ್ಯ ಮಂತ್ರಿಗಳು ಏನು ಹೇಳಿಕೆ ಕೊಡುತ್ತಾರೊ ನೋಡೋಣ. I have already disposed it off I do not want to go back.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ರಾಜಕುಮಾರ್...

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ, ನಾವು ಮಾತನಾಡುವುದಕ್ಕೆ ತಾವು ಅವಕಾಶ ಮಾಡಿಕೊಡಬೇಕು.

MR. SPEAKER.—Order, please.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೆ...

MR. SPEAKER.—Suo moto the Leader of the House can make a statement. How can I stop him. ನೀವು ಹೇಳುವುದಕ್ಕೆ ಸಿದ್ದವಿಲ್ಲದಿದ್ದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಜಿ. ನಾರಾಯಣಕುಮಾರ್.—ಮಾನ್ಯ ಅಧ್ಯಕ್ಷರೆ, ಇದೇನು ಸದನವೋ, ಅಥವಾ ಕುರಿ ದೊಡ್ಡಿಯೋ ?

(ಗೊಂದಲ)

ಶ್ರೀ ಎಸ್. ಸೂರ್ಯನಾರಾಯಣ ರಾವ್.— ಮಾನ್ಯ ಸದಸ್ಯರಾದ ನಾರಾಯಣ ಕುಮಾರ್ ರವರು ಕುರಿದೊಡ್ಡಿ ಎಂದು ಹೇಳಿದರು. ಆದರೆ ಈ ಸದನ ಕುರಿದೊಡ್ಡಿಯಲ್ಲ. ಆ ರೀತಿಯಲ್ಲಿ ಮಾತ ನಾಡಬಾರದು.

(INTERRUPTIONS)

ಶ್ರೀ ಎಸ್. ಬಂಗಾರಪ್ಪ — ನಮ್ಮ ಮಾತನ್ನು ಕೇಳತಕ್ಕ ಸೌಜನ್ಯತೆ ಇಲ್ಲದಿದ್ದರೆ ನಾವು ಈ ಸದನದಲ್ಲಿ ಏಕ್ಕೆ ಬಂದು ಕುಳಿತುಕೊಳ್ಳಬೇಕು ?

MR. SPEAKER.— If it is on a point of order', you can get up. ತಾವು ಈಗ ಏನನ್ನು ಕೇಳಬೇಕೆಂದಿದ್ದೀರಿ ?

ಶ್ರೀ ಎಸ್. ಬಂಗಾರಪ್ಪ.— ಸಭಾನಾಯಕರ ಹೇಳಿಕೆಯನ್ನು ಕೇಳಲು ನಾವು ಅಡ್ಡಿ ಬರುವುದಿಲ್ಲ, ಆದರೆ ನೋಟೀಸನ್ನು ನಾವು ಏತಕ್ಕೆ ಕೊಡಬೇಕು ?

ಅಧ್ಯಕ್ಷರು.— ಮುಖ್ಯಮಂತ್ರಿಯವರು ಹೇಳಿಕೆಯನ್ನು ಕೊಡಬೇಕೆಂದು ಬೇಳಿದಾಗ ಮೊದ ಲನೆಯ ಅವಕಾಶವನ್ನು ಅವರಿಗೆ ಕೊಡಬೇಕಾಗುತ್ತದೆ. ಅದು ಸಭೆಯ ನಿಯಮ— you cannot dictate terms.

ಶ್ರೀ ಎಸ್. ಬಂಗಾರಪ್ಪ.— ಅವರು ಹೇಳಿಕೆ ಕೊಡಬೇಕಾದರೆ ಕೊಡಲಿ ಆದರೆ ಈ ನೋಟೀಸ್ ಬಗ್ಗೆ ಮಾತನಾಡಲು ಅವಕಾಶ ನಮಗೆ ಕೊಡದೆಹೋದರೆ ನಾವು ನೋಟೀಸ್ ಕೊಟ್ಟು ಏನು ಪ್ರಯೋ ಜನ ?

SRI M. VEERAPPA MOILY.— When there is an adjournment motion, it will have precedence over all other matters.

MR. SPEAKER.— I have disposed it off.

SRI M. VEERAPPA MOILY.— I want to know under what rule ?

(INTERRUPTIONS)

ಶ್ರೀ ರಾಮಕೃಷ್ಣಹೆಗಡೆ.— ಹಿಂದಿನ ನಡೆವಳಿಕೆಗಳನ್ನು ತರಿಸಿ ನೋಡಿ

SRI M. VEERAPPA MOILY.— Adjournment motion will have precedence over all other matters.

ಶ್ರೀ ರಾಮಕೃಷ್ಣ ಹೆಗಡೆ.— ಹಿಂದಿನ ಪ್ರೊಸಿಡಿಂಗ್ಸ್‌ನ್ನು ತೆಗೆದು ನೋಡಿ, ಅಧ್ಯಕ್ಷರು ಅದರ ಬಗ್ಗೆ ತೀರ್ಮಾನ ಮಾಡಿದ್ದಾರೆ. ನಿಯಮಂ ೩೩೬ಕ್ಕೆ ಅದನ್ನು ಮಾರ್ಪಾಡು ಮಾಡಿದ್ದಾರೆ.

SRI M. VEERAPPA MOILY.— We agree but if the Hon'ble Speaker wants to give a ruling contrary to rules he has to.....

MR. SPEAKER.—I take very serious objection to it. if the Hon'ble Leader of the Opposition feels that the Speaker has given a ruling contrary to the rules, I take very strong exception to this. I want to know the rules from him.

ಶ್ರೀ ಎಂ. ವೀರಪ್ಪ ಮೊಯ್ಲಿ.— ನಾವು ಬೆಳಿಗ್ಗೆಯೇ ಅಡ್ಜರ್ನ್‌ಮೆಂಟ್ ಮೋಷನ್ ನೋಟೀಸ್ ಕೊಟ್ಟಿದ್ದೇವೆ. ಬೆಳಿಗ್ಗೆಯೇ ತಾವು ತಾಳ್ಮೆಯನ್ನು ಕಳೆದುಕೊಂಡರೆ ನಾವು ನಮ್ಮ ಕರ್ತವ್ಯವನ್ನು ಮಾಡುವುದು ಕಷ್ಟವಾಗುತ್ತದೆ.

ಅಧ್ಯಕ್ಷರು.— ನಿಧಿ ನಿಯಮಗಳನ್ನು ಮೀರಿ ಅಧ್ಯಕ್ಷರು ತೀರ್ಪು ಕೊಟ್ಟಿದ್ದಾರೆಂದು ಹೇಳಿದ್ದೀರಿ, ಅದನ್ನು ಸಬ್‌ಸ್ಟಾನ್‌ಷಿಯೇಟ್ ಮಾಡಿ.

ಶ್ರೀ ಎಂ. ವೀರಪ್ಪಮೊಯಿಲಿ.— ನಾನು ಸಬ್‌ಸ್ಟಾನ್‌ಷಿಯೇಟ್ ಮಾಡುತ್ತೇನೆ. ಈವತ್ತು ಬೆಳಿಗ್ಗೆ ನಾವು ಮತ್ತು ಅನೇಕ ಮಿತ್ರರು ನಿಲುವಳಿಸೂಚನೆಯನ್ನು ಕೊಟ್ಟಿದ್ದೇವೆ. ಈ ಸದನದ ಪರಂಪರೆ ವಿನೆಂದರೆ ಒಂದು ನಿಲುವಳಿಸೂಚನೆಯನ್ನು ಕೊಟ್ಟಾಗ ಅದರಲ್ಲಿ ನಿಯಮಗಳ ಪ್ರಕಾರ ಮುಖ್ಯ ವಿಚಾರ ಗಳನ್ನು ತಿಳಿಸಿರುವುದರಿಂದ ಅದರ ಬಗ್ಗೆ ಸಭೆಯಲ್ಲಿ ಪ್ರಸ್ತಾಪ ಮಾಡುವುದು ಈ ಸದನದಹಕ್ಕು. ಈ ವಿಷಯವು ಯಾವ ರೀತಿಯಲ್ಲಿ ನಿಲುವಳಿ ಸೂಚನೆಗೆ ಅರ್ಹವಾಗಿದೆ ಎಂಬುದನ್ನು ತಮಗೆ ತಿಳಿಸುವಂತಹ ಒಂದು ಅವಕಾಶವನ್ನು ನಮಗೆ ಕೊಡಬೇಕಾಗಿತ್ತು. ಅದರ ಬದಲು ತಾವು ನಿಯಮ ೩೩೪ಕ್ಕೆ ಕನ್‌ವರ್ಟ್ ಮಾಡಿದ್ದೇವೆಂದು ಸಭೆಗೆ ತಮ್ಮ ತೀರ್ಪನ್ನು ಕೊಟ್ಟಿದ್ದೀರಿ. ತಾವು ಕಾನೂನಿನ ವ್ಯಾಪ್ತಿ ಯಲ್ಲಿಯೇ ಮಾಡಿದ್ದೀರಿ. ಆದರೆ ತಾವು ಮಾರ್ಪಾಡು ಮಾಡುವ ಮೊದಲು ನಮ್ಮನ್ನು ಕೇಳಬಹು ದಾಗಿತ್ತು ಎಂದು ನಾವು ವಿನಂತಿ ಮಾಡಿಕೊಳ್ಳುತ್ತಿದ್ದೇವೆ. ತಮಗೆ ಹಕ್ಕು ಇದೆ ಆದರೂ ಸಹ ತಮ್ಮನ್ನು ನಾವು ವಿನಂತಿ ಮಾಡಿಕೊಳ್ಳುವುದೇನೆಂದರೆ ನಮ್ಮನ್ನು ವಿಶ್ವಾಸಕ್ಕೆ ತಾವು ತೆಗೆದುಕೊಳ್ಳಬೇಕು. ಮುಖ್ಯ ಮಂತ್ರಿಗಳು ಹೇಳಿಕೆಯನ್ನು ಕೊಡುತ್ತೇವೆಂದು ಹೇಳಿದಾಗ ನಾವು ಕುಳಿತುಕೊಂಡುಬಿಟ್ಟೆವು. ಆದರ ಬಗ್ಗೆ ಪ್ರಸ್ತಾಪ ಮಾಡಲೇ ಇಲ್ಲ ಮಾನ್ಯ ಸದಸ್ಯರಾದ ಪೂದೇಗೌಡರು ತಮ್ಮ ಕಳಕಳಿಯನ್ನು ವ್ಯಕ್ತ ಪಡಿಸಿದರು. ಒಂದು ಗಂಭೀರವಾದ, ಭೀಕರವಾದ ಹಾಗೂ ಅಸಮಾನ್ಯವಾದ ಪರಿಸ್ಥಿತಿ ಕರ್ನಾಟಕ ರಾಜ್ಯದಲ್ಲಿ ಇದ್ದು ಜನರು ಗೊಂದಲದಲ್ಲಿ ಇದ್ದಾರೆಂದು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಾಗ ತಾವು ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾರ್ಪಾಡು ಮಾಡಿದ್ದರೆ ಚೆನ್ನಾಗಿರುತ್ತಿತ್ತು. ವಿರೋಧ ಪಕ್ಷದ ನಾಯಕರನ್ನು ಮತ್ತು ಸಭೆಯ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮಾರ್ಪಾಡು ಮಾಡ ತಕ್ಕಂದದ್ದು ಸದನದ ಸಂಪ್ರದಾಯವಾಗಿದೆ ಆದರೆ ಈವತ್ತಿನ ದಿವಸ ತಾವು ತಮ್ಮ ವಿವೇಚನೆಯಂತೆ ಮಾರ್ಪಾಡುಮಾಡಿಬಿಟ್ಟಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆ ಕೊಡಲು ಅಪ್ಪಣೆ ಕೊಟ್ಟಿದ್ದೇನೆ ಅಂದರೆ... ..

ಅಧ್ಯಕ್ಷರು.— ನಾನು 'ಲೀಡರ್ ಆಫ್ ದಿ ಹೌಸ್' ಎಂದು ಹೇಳಿದ್ದು.

ಶ್ರೀ ಎಂ. ವೀರಪ್ಪಮೊಯಿಲಿ.— ಮುಖ್ಯಮಂತ್ರಿಯವರ ಹೇಳಿಕೆಗೆ ಪೃಥಮ ಪ್ರಾಶಸ್ತ್ಯವನ್ನು ಕೊಡಬೇಕು, ಅನಂತರ ಇದು ಎಂದು ಹೇಳಿದರೆ it may not be in consonance with the rules and convention. This is what I said.

ಶ್ರೀ ರಾಮಕೃಷ್ಣಹೆಗಡೆ.— ಅದೇ ವಿಚಾರದಲ್ಲಿ ಹೇಳಿಕೆ....

ಶ್ರೀ ಎಂ. ವೀರಪ್ಪಮೊಯಿಲಿ.— ನಿಲುವಳಿ ಸೂಚನೆಯ ಸ್ಥಾನವನ್ನು ಪಲ್ಲಟ ಮಾಡತಕ್ಕಂಥದ್ದು ಸರಿಯಲ್ಲ ಸಭಾನಾಯಕರು ಯಾವುದೇ ಹೇಳಿಕೆಯನ್ನು ಕೊಡಬೇಕಾದರೂ ಸಹ ಅದು ನಿಲುವಳಿ ಸೂಚನೆ ನಂತರವೇ ಆಗಬೇಕಾಗುತ್ತದೆ ನಿಲುವಳಿಸೂಚನೆಯ ಮೇಲಿನ ಅಂತಿಮಕ್ಕೆ ಹೋಗಲು ಸಾಧ್ಯ ವಾಗುವುದಿಲ್ಲ. ತಾವು ಬಹಳ ಜೋರಾಗಿ ನಮ್ಮ ಮೇಲೆ ಪ್ರಹಾರ ಮಾಡಿದ್ದೀರಿ. ಈ ಸದನದಲ್ಲಿ ಹಕ್ಕಿನ ಪ್ರಶ್ನೆಗಳು ಬಂದಾಗ ಅಥವಾ ಈ ಸಭೆಯ ಘನತೆ ಗೌರವದ ಪ್ರಶ್ನೆ ಬಂದಾಗ ನಮ್ಮ ಅಭಿಪ್ರಾಯವನ್ನು ಸೂಚಿಸಲು ನಮಗೆ ಹಕ್ಕು ಇದೆ. ನಮಗೆ ಇರತಕ್ಕಂಥ ಅಧಿಕಾರ ವ್ಯಾಪ್ತಿಯಲ್ಲಿ ಈ ಸೂಚನೆಯನ್ನು ಕೊಟ್ಟಿದ್ದೇವೆ. ಆ ಒಂದು ಭಾವನೆಯಲ್ಲಿ ನಾವು ಹೇಳಿದ್ದೇವೆಯೇ ಹೊರತು ತಮ್ಮ ಮೇಲೆ ಅಗೌರವ ವನ್ನು ತೋರಿಸುವ ದೃಷ್ಟಿಯಿಂದ ಅಲ್ಲ.

We are not entitled to make any reflection or remarks on the Chair and we are not going to make. We have got highest respect for the Chair and you. you hail from my Constituency.

ನೀವು ಕೂಡ ಪಾರ್ಲಿಮೆಂಟರಿ ಸದಸ್ಯರಾಗಿದ್ದೀರಿ, ನಮ್ಮ ಕ್ಷೇತ್ರದ ಮುಖಾಂತರವೇ ಆರಿಸಿಯೂ ಕೂಡ ಬಂದಿದ್ದೀರಿ. ತಮ್ಮ ಸ್ಥಾನ ಘನತೆ ಗೌರವವನ್ನು ಯಾವಾಗಲೂ ಉಳಿಸಿಕೊಂಡು ಹೋಗಬೇಕು ಎಂದು ಹೇಳುವವರಲ್ಲಿ ನಾನು ಒಬ್ಬ. ಈ ಘಟನೆ ಬಗ್ಗೆ ತಾವು ತಕ್ಷಣವಾಗಿ ಮಾರ್ಷಾಡು ಮಾಡಿರುವುದು ನೋಡಿ ನಮಗೆ ಒಂದು ರೀತಿಯಾದ ಷಾಕ್ ಆಯಿತು ಆದರೂ ಕೂಡ ಕರ್ನಾಟಕ ರಾಜ್ಯದ ಜನತೆಯ ಹಿತದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು ಹೇಳಿಕೆಯನ್ನು ಕೊಡಲಿ ಎಂದು ನ್ಯಾಯವಾಗಿ ಕುಳಿತುಕೊಂಡೆವು. ಏನು ಆಕ್ಷೇಪಣೆ ಮಾಡಲಿಲ್ಲ ಆದರೆ ತಾವು ಇದರ ಮೇಲೆ ಕಾನೂನು ನಿಯಮದ ವ್ಯಾಪ್ತಿಯ ಬಗ್ಗೆ ಒಂದು ತೀರ್ಪನ್ನು ಕೊಡತಕ್ಕಂಥ ದಾರಿಯಲ್ಲಿ ಹೋದಾಗ ನಮ್ಮ ಮನಸ್ಸಿನ ಅಳಲನ್ನು ತಮ್ಮ ಮುಂದೆ ತೋಡಿಕೊಂಡೆವು. ನಿಮ್ಮ ಸ್ಥಾನಕ್ಕೆ ಯಾವುದೇ ಚ್ಯುತಿ ಬರದಂತೆ ಕಾಯ್ದುಕೊಳ್ಳುವ ದೃಷ್ಟಿಯಲ್ಲಿ ನಾವೂ ಕೂಡ ಪ್ರಥಮ ಪಂಕ್ತಿಯಲ್ಲಿದ್ದೇವೆ. ಈ ಸದನದ ಎಲ್ಲ ಸದಸ್ಯರ ಸಂಪೂರ್ಣ ವಿಶ್ವಾಸವನ್ನು ತೆಗೆದುಕೊಂಡು ತಾವು ತೀರ್ಪನ್ನು ಕೊಟ್ಟಿದ್ದರೆ ಸಮಗ್ರ ನೆಮ್ಮದಿಯೂಗುತ್ತಿತ್ತು.

ಶ್ರೀ ಪೈಕೆ. ರಾಮಯ್ಯ.— ಮಾನ್ಯ ಅಧ್ಯಕ್ಷರು ಯಾವ ಕಾನೂನನ್ನು ಉಲ್ಲಂಘನೆ ಮಾಡಿದರು ಎಂಬುದನ್ನು ಅವರು ಹೇಳಲಿಲ್ಲ. ಅದನ್ನು ವಿಶ್ಲೇಷಿಸಬೇಕು.

ಶ್ರೀ ಭೀಮಣ್ಣ ಖಂಡ್ರೆ.— ಮಾನ್ಯ ಅಧ್ಯಕ್ಷರೆ, ನನ್ನದೊಂದು ಕ್ರಿಯಾಲೋಪವಿದೆ

ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಯಾರಾದರೂ ಒಂದು ವಿಷಯದ ಮೇಲೆ ನಿಲುವಳಿ ಸೂಚನೆಯನ್ನು ಕೊಟ್ಟಾಗ ತಾವು ಏನು ಮಾಡಬೇಕು ಎಂಬ ಬಗ್ಗೆ ಈ ರೂಲ್ಸ್‌ನಲ್ಲಿ ಈ ರೀತಿ ಹೇಳಿದೆ.—

"The Speaker if he gives consent under rule 60 and holds that the matter proposed to be discussed is in order, shall after the questions and before the list of business is entered upon, call the Member concerned who shall raise in his place and ask for leave to move the adjournment of the House:

Provided that where the Speaker has refused his consent under rule 60 or is of opinion that the matter proposed to be discussed is not in order, he may, if he thinks it necessary read the notice of motion and state the reasons for refusing consent or holding the motion as not being in order;

Provided further that where the Speaker is not in possession of full facts about the matter mentioned therein, he may before giving or refusing his consent read the notice of the motion and hear from the Minister and / or members concerned a brief statement of facts and then give his decision on the admissibility of the motion".

ಇದರ ಪ್ರಕಾರ ತಾವು ನಿಲುವಳಿ ಸೂಚನೆಯನ್ನು ರಿಜೆಕ್ಟ್ ಮಾಡಬಹುದು. ಆದರೆ ಅದಕ್ಕೆ ಮುಂಚೆ ತಾವು ಸೂಚನೆ ಕೊಟ್ಟವರು ಏನು ಹೇಳುತ್ತಾರೆ ಮತ್ತು ಸಂಬಂಧಪಟ್ಟ ಮಂತ್ರಿಗಳು ಏನು ಹೇಳುತ್ತಾರೆಂಬುದನ್ನು ಕೇಳಿದ ನಂತರವೇ ರಿಜೆಕ್ಟ್ ಮಾಡಬೇಕಾಗುತ್ತದೆ. ಆದ್ದರಿಂದ ಈ ಬಗ್ಗೆ ನನ್ನ ಮನವಿ ಇಷ್ಟೆ, take the confidence of the Members and then do whatever you like. ಈ ಬಗ್ಗೆ ತೀರ್ಮಾನ ಕೈಕೊಳ್ಳುವುದು ನಿಮಗೇ ಬಿಟ್ಟಿದ್ದು. ಆದರೆ ಮೊದಲೇ ತೀರ್ಮಾನ ಮಾಡಿದ್ದೇನೆಂದು ತಾವು ಹೇಳುವುದು ಸರಿಯಲ್ಲ.

ಅಧ್ಯಕ್ಷರು.—ಈಗ ವಿರೋಧಪಕ್ಷದ ನಾಯಕರು ಎರಡು ಮುಖ್ಯವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದಾರೆ.....

ಶ್ರೀ ಎಸ್. ಆರ್. ಬೊಮ್ಮಾಯಿ,—ತಾವು ಹೇಳುವುದಕ್ಕೆ ಮೊದಲೇ ಇದೇ ವಿಚಾರದಲ್ಲಿ ನಾನು ಒಂದೆರಡು ವಿಚಾರಗಳನ್ನು ಹೇಳಲು ತಾವು ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು. — ಆಗಬಹುದು.

ಶ್ರೀ ಎಸ್. ಆರ್. ಬೊಮ್ಮಾಯಿ — ಮಾನ್ಯ ಅಧ್ಯಕ್ಷರೇ, ಲೋಕಸಭೆಯಲ್ಲಾಗಲೀ, ನಮ್ಮ ಸಭೆಯಲ್ಲಾಗಲೀ ಅಥವಾ ಬೇರೆ ಸಭೆಗಳಲ್ಲಿಯಾಗಲೀ ಯಾರಾದರೂ ನಿಲುವಳಿ ಸೂಚನೆಯನ್ನು ಕೊಟ್ಟಾಗ, ಅದರ ಮೇಲೆ ಚರ್ಚೆಗೆ ಅವಕಾಶ ಪಡೆಯಲು ಅಧ್ಯಕ್ಷರ ಅನುಮತಿ ಪಡೆಯಲು ಹಾಗೂ ಅಧ್ಯಕ್ಷರ ಮನವೊಲಿಸಲು ಮೊದಲಿಗೆ ಕೆಲವು ಹೇಳಿಕೆಗಳನ್ನು ಕೊಡುವುದು ನಡೆದುಕೊಂಡು ಬಂದಂಥ ಒಂದು ಪರಂಪರೆ. ಶ್ರೀ ಮಾದೇಗೌಡರು ಮತ್ತು ವಿರೋಧಪಕ್ಷದ ನಾಯಕರೂ ಸಹ ಇದೇ ಮಾತನ್ನು ಹೇಳಿದ್ದಾರೆ. ಆದರೆ ಕೆಲವು ಸಲ ನಿಲುವಳಿ ಸೂಚನೆ ಮೇಲೆ ಹೇಳಿಕೆ ಕೊಡಲು ಅವಕಾಶ ಕೊಡದೆ ಅದನ್ನು ತಳ್ಳಿಹಾಕಿರುವಂತಹ ಉದಾಹರಣೆಗಳು ಲೋಕಸಭೆಯಲ್ಲಿಯೂ ಇದೆ ಎಂದು ಅಧ್ಯಕ್ಷರು ಹೇಳಿದ್ದಾರೆ. ಮತ್ತು ಇದು ವಿಷಯದ ಮಹತ್ವ ಹಾಗೂ ಪರಿಸ್ಥಿತಿಯ ಮೇಲೆ ಹೋಗುತ್ತದೆಂದು ಮತ್ತು ಇದೇ ಆಧಾರ ಮೇಲೆ ತಾವು ತೀರ್ಮಾನ ತೆಗೆದುಕೊಂಡಿರುವುದಾಗಿ ಅಧ್ಯಕ್ಷರು ಹೇಳಿದ್ದಾರೆ. ಆದರೆ ಸಭೆಯ ಮುಂದೆ ನಿಲುವಳಿ ಸೂಚನೆ ಇರುವಾಗ ಇದಕ್ಕೆ ಸಂಬಂಧಪಟ್ಟಂತೆ ಮೊದಲೇ ಸಭಾನಾಯಕರು ಒಂದು ಹೇಳಿಕೆ ಕೊಡಲು ಅಧ್ಯಕ್ಷರು ಪ್ರಾಶಸ್ತ್ಯ ಕೊಡಬಹುದೇ ಎಂದು ಕೇಳಿದ್ದಾರೆ. ಆದರೆ ಈ ಮೊದಲು ಶ್ರೀ ರಂಗನಾಥ್ ಅವರು ಈ ಸಭೆಯ ಅಧ್ಯಕ್ಷರಾಗಿದ್ದಾಗ ನಾವು ವಿರೋಧಪಕ್ಷದ ಕಡೆಯಿಂದ ಸರ್ಕಸ್ ದುರಂತದ ಬಗ್ಗೆ ನಿಲುವಳಿ ಸೂಚನೆಯನ್ನು ಕಳಿಸಿಕೊಟ್ಟಿದ್ದೆವು. ನಿಲುವಳಿ ಸೂಚನೆಯ ಮೂಲಕ ಸರ್ಕಸ್ ದುರಂತದ ನ್ಯಾಯಾಂಗ ತನಿಖೆಗೆ ಸರ್ಕಾರವನ್ನು ಒತ್ತಾಯಪಡಿಸುವುದು ನಮ್ಮ ಉದ್ದೇಶವಾಗಿತ್ತು. ಆದರೆ ನಿಲುವಳಿ ಸೂಚನೆ ತೆಗೆದುಕೊಳ್ಳುವುದಕ್ಕೆ ಮೊದಲೇ ಆಗಿನ ಮುಖ್ಯಮಂತ್ರಿಗಳು ಹೇಳಿಕೆ ಕೊಡಲು ಮುಂದೆ ಬಂದಾಗ ಸರ್ಕಾರದ ಹೇಳಿಕೆ ಏನಃ ಬರುತ್ತದೋ ನೋಡೋಣ ಎಂದು ನಾವು ಆದಕ್ಕೆ ಒಪ್ಪಿಗೆ ಕೊಟ್ಟೆವು. ಆದ್ದರಿಂದ ಒಂದೊಂದು ಸಲ.....

ಶ್ರೀ ಎಂ. ವೀರಪ್ಪ ಮೊಯ್ಲಿ.—ಆ ಬಗ್ಗೆ ನಮ್ಮ ವಾದ ಏನೂ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ತಾವು ಪಾದ ಮಾಡಿದ್ದೀರಿ. ಸಭೆಯ ಮುಂದೆ ನಿಲುವಳಿ ಸೂಚನೆ ಇರುವಾಗ ಸಭಾನಾಯಕರು ಹೇಳಿಕೆ ಕೊಡಲು ಮೊದಲ ಪ್ರಾಶಸ್ತ್ಯ ಕೊಡಬಹುದೇ ಎಂದು ತಾವು ಪ್ರಶ್ನೆ ಮಾಡಿದ್ದೀರಿ. ಆದರೆ ಸರ್ಕಾರದಿಂದ ಮೊದಲೇ ಹೇಳಿಕೆ ಕೊಟ್ಟರೆ ಮುಂದಿನ ಚರ್ಚೆಗೆ ಅನುಕೂಲವಾಗುತ್ತದೆಂಬ ಕಾರಣದಿಂದ ನಿಲುವಳಿ ಸೂಚನೆಗೆ ಮೊದಲೇ ಸರ್ಕಾರದಿಂದ ಹೇಳಿಕೆ ಕೊಟ್ಟ ಅನೇಕ ಉದಾಹರಣೆಗಳಿವೆ. ಇಂತಹ ಸಂದರ್ಭಗಳಲ್ಲಿ ವಿರೋಧಪಕ್ಷದವರ ಬೇಡಿಕೆಯನ್ನು ಸರ್ಕಾರದವರು ಮೊದಲೇ ಒಪ್ಪಿಕೊಳ್ಳಬಹುದು. ಇದಕ್ಕೆ ಸರ್ಕಸ್ ದುರಂತದ ಪ್ರಕರಣವನ್ನು ಉದಾಹರಣೆಯಾಗಿ ಕೊಡಬಹುದು. ಈಗಲೂ ಸಹ ಅಧ್ಯಕ್ಷರು ಕೆಲವರು ಕೊಟ್ಟಿರುವ ನಿಲುವಳಿ ಸೂಚನೆಯನ್ನು ನಿಯಮ ೫೫ಳಿಕ್ಕೆ ಪರಿವರ್ತನೆ ಮಾಡಿದ್ದಾರೆ. ಈಗ ಸಭಾನಾಯಕರು ಹೇಳಿಕೆ ಕೊಡುವವರಿದ್ದಾರೆ. ಅವರು ಹೇಳಿಕೆ ಕೊಡಲು ತಾವೂ ಸಹ ಒಪ್ಪಿಕೊಂಡ ಮೇಲೆ ಕೂಡ ಪುನಃ ಪುನಃ ಕ್ರಿಯಾಲೋಪಗಳನ್ನು ಎತ್ತುವಂತಹ ಅವಶ್ಯಕತೆ ಇರಲಿಲ್ಲ, ಅಧ್ಯಕ್ಷರ ಅಪ್ಪಣೆಯ ಮೇಲೆ ಸಭಾ ನಾಯಕರು ಹೇಳಿಕೆ ಕೊಡುತ್ತಾರೆ. ಅದನ್ನು ಕೇಳಿದ ನಂತರ ಬೇಕಾದರೆ ಚರ್ಚೆ ಮಾಡಬಹುದು. ಇಲ್ಲವೇ ಕ್ಲಾರಿಫಿಕೇಷನ್‌ಗಳನ್ನು ಕೇಳಬಹುದಾಗಿತ್ತು. ಇಂತಹ ಪ್ರಸಂಗಗಳು ಈ ಹಿಂದೆ ಇದೇ ಸಭೆಯಲ್ಲಿ ಬಂದಾಗ ಹಿಂದಿನ ಸರ್ಕಾರದವರು ಮೊದಲೇ ನ್ಯಾಯಾಂಗ ತನಿಖೆಗೆ ಒಪ್ಪಿಕೊಂಡ ಕಾರಣದಿಂದ ನಿಲುವಳಿ ಸೂಚನೆಯ ಮೇಲೆ ಚರ್ಚೆ ಮಾಡದೆ ಅದನ್ನು ಮುಕ್ತಾಯ ಮಾಡಿದ ಉದಾಹರಣೆಗಳಿವೆ. ಆದ್ದರಿಂದ ನೆನ್ನೆಯ ಘಟನೆಯ ಬಗ್ಗೆ ಸ್ಟೇಟ್‌ಮೆಂಟ್ ಮಾಡಲು ಸಭಾನಾಯಕರು ಮುಂದೆ ಬಂದಾಗ ತಾವು ಅದಕ್ಕೆ ಅವಕಾಶ ಮಾಡಿಕೊಡಬೇಕಾಗುತ್ತದೆ.

ಅಧ್ಯಕ್ಷರು —ನಾನು ಹೇಳಿದ್ದನ್ನು ವಿರೋಧಪಕ್ಷದ ನಾಯಕರು ಮತ್ತು ಕೆಲವು ಸದಸ್ಯರು ತಪ್ಪಾಗಿ ಅರ್ಥ ಮಾಡಿಕೊಂಡಂತೆ ಕಾಣುತ್ತದೆ. ಮೊದಲನೆಯದಾಗಿ ವಿಷಯದ ಗಂಭೀರತೆಯನ್ನು ಗಮನಿಸಿ ಅದಕ್ಕೆ ಮೊದಲ ಪ್ರಾಶಸ್ತ್ಯ ಕೊಡಬೇಕಾಗುತ್ತದೆ. ಸಾರ್ವಜನಿಕ ಹಿತದೃಷ್ಟಿಯಿಂದ ಕೆಲವು ಗಂಭೀರವಾದಂಥ ವಿಚಾರಗಳ ಬಗ್ಗೆ ಇಲ್ಲಿ ಮುಕ್ತವಾದಂಥ ಚರ್ಚೆಯಾಗಬೇಕಾಗುತ್ತದೆ. ಯಾವ ನಿಯಮದ ಪ್ರಕಾರ ಚರ್ಚೆಯಾಗಬೇಕು ಎಂಬುದನ್ನು ನೋಡಲು ಹೊರಟರೆ ಅದು ತಾಂತ್ರಿಕ ಪ್ರಶ್ನೆ

ಯಾಗುತ್ತದೆ, ಈಗ ನನಗೆ ಈ ವಿಚಾರದಲ್ಲಿ ನಿಲುವಳಿ ಸೂಚನೆಗಳು ಬಂದಿವೆ ಮತ್ತು ಈ ವಿಚಾರದಲ್ಲಿ ಮಾತನಾಡಲು ನಿಯಮ ೩೩೪ ಕಲಂ ಪ್ರಕಾರ ಕೂಡ ನನಗೆ ನೋಟೀಸ್‌ಗಳು ಸದಸ್ಯರುಗಳಿಂದ ಬಂದಿವೆ ನಿಲುವಳಿ ಸೂಚನೆ ಮೂಲಕ ಇದು ಚರ್ಚೆಯಾಗಬೇಕೆಂದು ತಾವು ಹೇಳಿದ್ದೀರಿ. ಆದರೆ ಕರ್ನಾಟಕ ರಾಜ್ಯದ ಜನರ ಹಿತಾಶಕ್ತಿಯನ್ನು ಗಮನದಲ್ಲಿಟ್ಟುಕೊಂಡು ಮತ್ತು ಈ ಸದನವು ನಡೆದುಕೊಂಡು ಬಂದ ಪರಂಪರೆಯನ್ನು ಗಮನದಲ್ಲಿಟ್ಟುಕೊಂಡು ಹಾಗೂ ವಿಷಯವು ವಿಷಯಾಂತರವಾಗದೆ ಮುಕ್ತವಾಗಿ ಚರ್ಚೆಯಾಗಬೇಕು. ಎಂಬತಕ್ಕಂಥ ನಿರ್ಧಾರಕ್ಕೆ ನಾನು ಬಂದ ಈ ಮಾತನ್ನು ಹೇಳಿದ್ದೇನೆ. ಶ್ರೀಮಾನ್ ಭೀಮಣ್ಣ ಖಂಡ್ರೆಯವರು ಇಲ್ಲಿ ಒಂದು ವಿಚಾರವನ್ನು ಹೇಳಿದ್ದಾರೆ. ಏನೆಂದರೆ ;

> "Provided that where the Speaker has refused his consent under rule 60 or is of opinion that the matter proposed to be discussed is not in order, he may, if he thinks fit necessary, read the notice of motion and state the reasons for refusing consent or holding the motion as not being in order".
>
> 'If he thinks necessary'. Is very important.

ಹಾಗೆಯೇ ಪ್ರಾಕ್ಟೀಸ್ ಅಂಡ್ ಪ್ರೊಸೀಜರ್‌ನ ಳಿಳಿನೇ ಪುಟದಲ್ಲಿ ಒಂದು ಮಾತನ್ನು ಹೇಳುತ್ತಾರೆ. ಅದು ಈ ರೀತಿ ಇದೆ ;—

> "The speaker gives his consent to the moving of an adjournment motion if he is satisfied that the matter sought to be raised is definite urgent, and of public importance Because the matter proposed to be discussed is a definite of urgent public importance, the Speaker is not as a matter of course bound to rule the motion in order. A matter may be urgent, it may be definite, it may be of public importance, and yet the Speaker may, in a proper case disallow such a motion. The refusal to give consent is in the absolute discretion of the Speaker and he is not bound to give any reasons."

ಇಲ್ಲಿಯೂ ಸಹ ಕಾರಣ ಕೊಡಬೇಕೆಂದು ಹೇಳುವುದಿಲ್ಲ. ಒಟ್ಟಿನಲ್ಲಿ ವಿಷಯ ಚರ್ಚೆಯಾಗಬೇಕು. ಇದು ಯಾವ ರೂಪದಲ್ಲಿ ಚರ್ಚೆಯಾಗಬೇಕು ಎಂಬುದಕ್ಕೆ ಮೊದಲೇ ವಿಷಯದ ಗಂಭೀರತೆಯನ್ನು ಗಮನಿಸಿ ಇದೇ ವಿಷಯದಲ್ಲಿ ಮಾನ್ಯ ಸಭಾನಾಯಕರು ಒಂದು ಹೇಳಿಕೆ ಕೊಡುತ್ತೇನೆಂದು ಕೇಳಿಕೊಂಡಾಗ ಅವರಿಗೆ ಹೇಳಿಕೆ ಕೊಡಲು ಮೊದಲು ಪ್ರಾಶಸ್ತ್ಯ ಕೊಟ್ಟಿದ್ದೇನೆ. ಅವರ ಹೇಳಿಕೆಯಿಂದ ತಮಗೆ ಸಮಾಧಾನವಾಗದಿದ್ದರೆ ಪ್ರಶ್ನೆಗಳ ಮೂಲಕವೋ ಅಥವಾ ಬೇರೆ ಯಾವುದಾದರೂ ರೂಪದಲ್ಲಿ ಚರ್ಚೆ ಮಾಡಲು ಅವಕಾಶ ಮಾಡಿಕೊಡುತ್ತೇನೆಂದು ನಾನು ಹೇಳಿದ್ದೇನೆ.

೧೨-೩೦ ಪಿ. ಎಂ.

ಮಾನ್ಯ ವಿರೋಧಪಕ್ಷದ ನಾಯಕರು ಒಪ್ಪಿಕೊಂಡಿದ್ದಾರೆ ಆದ್ದರಿಂದ ತಾವು ಆ ಬಗ್ಗೆ ತೀಪ್ರವಾಗಿ ಚರ್ಚೆ ಮಾಡದೆ ಮಾನ್ಯ ಮುಖ್ಯಮಂತ್ರಿಗಳು ಸರ್ಕಾರದ ಪರವಾಗಿ ಏನು ಹೇಳಿಕೆಯನ್ನು ಕೊಡುತ್ತಾರೋ ಕೊಡಲಿ. ಆದಕೆ ತಾವು ಎಲ್ಲರೂ ಸಮಾಧಾನದಿಂದ ಇರಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಭೀಮಣ್ಣ ಎಸ್. ಖಂಡ್ರೆ.—ಮಾನ್ಯ ಅಧ್ಯಕ್ಷರೇ ಕ್ಲಾಸ್ ಎರಡರಲ್ಲಿ ನೋಡಿ.

ಅಧ್ಯಕ್ಷರು.—ತಾವು ಕ್ಲಾಸ್ (೨) ಇರಲಿ ರೂಲ್ ಭಿಗನ್ನು ನೋಡಿ ಆಗ ತಮಗೆ ಗೊತ್ತಾಗುತ್ತದೆ.

ಶ್ರೀ ಹನುಮಂತರಾವ್ ದೇಸಾಯಿ.— ಮಾನ್ಯ ಅಧ್ಯಕ್ಷರು ಒಂದು ರೂಲಿಂಗ್ ಕೊಟ್ಟ ಮೇಲೆ ಮಾನ್ಯ ಸದಸ್ಯರು ಮತ್ತೆ ಮತ್ತೆ ಎದ್ದು ನಿಂತು ಮಾತನಾಡುವುದು ಸರಿಯಲ್ಲ.

(ಗೊಂದಲ)

ಶ್ರೀ ಹೆಚ್. ಗಂಗಾಧರಸ್.— ಮಾನ್ಯ ಸದಸ್ಯರು ಬಹಳ ಹಿರಿಯ ಸದಸ್ಯರು. ಅಧ್ಯಕ್ಷರು ಕೊಟ್ಟ ರೂಲಿಂಗ್‌ಗೆ ತಾವು ಬೆಲೆ ಕೊಡದಿದ್ದರೆ ಹೇಗೆ ?

ಅಧ್ಯಕ್ಷರು —ಇದು ಬಹಳ ತೀವ್ರತರವಾದಂಥ ವಿಚಾರ. ಇದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ. ಆಲ್ಲಿ ಸುಮಾರು ೩ ಜನರು ಸತ್ತಿದ್ದಾರೆ.

ಶ್ರೀ ಕೆ. ಹೆಚ್. ರಂಗನಾಥ್.—ಸ್ವಾಮಿ ಸುಮಾರು ೩ ಜನರು ಸತ್ತಿದ್ದಾರೆ. ೧೬ ಜನರು ಇರಿತಕ್ಕೆ ತುತ್ತಾಗಿದ್ದಾರೆ. ಮತ್ತು ೫೦-೬೦ ಜನರು ಆಸ್ಪತ್ರೆಯಲ್ಲಿದ್ದಾರೆಂದು ನಾನು ಪತ್ರಿಕೆಯಲ್ಲಿ ಓದಿದ್ದೇನೆ.

ಮುಖ್ಯಮಂತ್ರಿಯವರ ಹೇಳಿಕೆ

ವಿಷಯ.—ದಿನಾಂಕ ೧೮-೧-೧೯೮೪ ರ ಬೆಂಗಳೂರು ಬಂದ್ ಬಗ್ಗೆ :

ಶ್ರೀ ರಾಮಕೃಷ್ಣ ಹೆಗಡೆ.— ಸ್ವಾಮಿ ನಾನು ಆ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತಿದ್ದೇನೆ. ಸನ್ಮಾನ್ಯ ಅಧ್ಯಕ್ಷರೇ ನಾನು ಮೊನ್ನೆಯ ದಿವಸ ಈ ಸದನದಲ್ಲಿ ಒಂದು ಭೀತಿಯನ್ನು ವ್ಯಕ್ತಪಡಿಸಿದ್ದೇನೆ. ಅದು ಏನೆಂದರೆ ಡಾ. ರಾಜಕುಮಾರ್ ಅಭಿಮಾನಿಗಳ ಸಂಘದವರು ಬೆಂಗಳೂರ್ ಬಂದ್‌ಗೆ ಕರೆಯನ್ನು ಕೊಟ್ಟಿದ್ದಾರೆ. ಅವರು ಆ ರೀತಿ ಕರೆಯನ್ನು ಕೊಟ್ಟಿರುವುದರಿಂದ ಬೆಂಗಳೂರು ನಗರದ ನಾಗರೀಕರಿಗೆ ಬಹಳ ಅನಾನುಕೂಲವಾಗಬಹುದೆಂದು ಸಹ ಹೇಳಿದ್ದೇನೆ. ಮತ್ತೆ ಸರ್ಕಾರೀ ಆಸ್ತಿಪಾಸ್ತಿಗಳಿಗೂ ಹಾಗೂ ಖಾಸಗೀ ಆಸ್ತಿಪಾಸ್ತಿಗಳಿಗೂ ಕೂಡ ಹಾನಿಯಾಗಬಹುದೆಂದು ಮತ್ತು ಹಿಂಸಾಚಾರಕ್ಕೆ ಜನರು ತುತ್ತಾಗ ಬಹುದೆಂದು ನಾನು ಒಂದು ಭೀತಿಯನ್ನು ಈ ಸದನದಲ್ಲಿ ವ್ಯಕ್ತಪಡಿಸಿದ್ದೆ. ಆದರೆ ನಾನು ವ್ಯಕ್ತಪಡಿಸಿದಂಥ ಭೀತಿ ಸತ್ಯವಾಗಿ ಪರಿಣಮಿಸಿತು. ಆದರೆ ಇದ್ದುದ್ದರಲ್ಲಿ ಯಾರಿಗೂ ಕೂಡ ಪ್ರಾಣ ಹಾನಿಯಾಗಿಲ್ಲ. ಅಥವಾ ಮೂವುದೇ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹಾನಿಯಾಗಿಲ್ಲ. ಆದರೆ ನಾವು ನಿರೀಕ್ಷೆ ಮಾಡಿದಷ್ಟು ವ್ಯಾಪಕ ರೀತಿಯಲ್ಲಿ ಯಾವುದೇ ರೀತಿಯ ಪರಿಣಾಮವಾಗಿಲ್ಲ. ಆದು ನಮಗೆ ಒಂದು ದೊಡ್ಡ ಸಮಾಧಾನವನ್ನು ತಂದಿದೆ. ಆದರೆ ನ್ನೆಯ ದಿವಸ ಬಂದ್ ವ್ಯಾಪಕ ರೀತಿಯಲ್ಲಿ ಪ್ರಾರಂಭವಾಯಿತು ಎಂದರೆ ಮೊಟ್ಟಮೊದಲನೆಯದಾಗಿ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳನ್ನು ಹೊತ್ತು ತರುತ್ತಿದ್ದ ಒಂದು ವ್ಯಾನ್‌ನನ್ನು ಕಿಡಿಗೇಡಿಗಳು ಅಡ್ಡಗಟ್ಟಿ ಆ ವ್ಯಾನ್‌ಗೆ ಬೆಂಕಿಯನ್ನು ಇಟ್ಟು ಸುಟ್ಟು ಹಾಕಿದರು. ಅದಾದ ಸ್ವಲ್ಪ ಹೊತ್ತಿನ ನಂತರ ಅದೇ ಪತ್ರಿಕೆಗಳಿಗೆ ಸಂಬಂಧಪಟ್ಟಿರುವಂಥ ಮತ್ತೊಂದು ವ್ಯಾನ್‌ನನ್ನು ಬಸವನಗುಡಿಯಲ್ಲಿ ಸುಟ್ಟು ಹಾಕಿದ್ದಾರೆ. ಈ ಹಿಂಸಾಚಾರವನ್ನು ತಡೆಗಟ್ಟಲು ಪೋಲೀಸ್ ಇಲಾಖೆಯವರು ಮತ್ತು ಗೃಹಖಾತೆಯ ಇಲಾಖೆಯವರು ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟರ ಮಟ್ಟಿಗೆ ತಮ್ಮ ಸೇವೆಯನ್ನು ಮಾಡಿ ಹದಗೆಟ್ಟಿದ್ದ ವಾತಾವರಣವನ್ನು ಶಾಂತಿಗೆ ತಂದಿದ್ದಾರೆ. ಆದ್ದರಿಂದ ಇಂಥ ಪರಿಸ್ಥಿತಿಯನ್ನು ಹತೋಟಿಗೆ ತಂದ ಎರಡೂ ಇಲಾಖೆಗಳಿಗೂ ಕೂಡ ನಾನು ನನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ಅವರು ಉಂಟಾಗಿದ್ದಂತಹ ಪರಿಸ್ಥಿತಿಯನ್ನು ಹತೋಟಿಗೆ ತರಲು ಯಶಸ್ವಿಯಾಗಿದ್ದಾರೆ ನ್ನೆಯ ದಿವಸ ನಡೆದಂಥ ಹಿಂಸಾಚಾರದಲ್ಲಿ ಸುಮಾರು ೬೨ ಜನರು ಗಾಯ ಗೊಂಡಿದ್ದಾರೆ ಇದರಲ್ಲಿ ಸುಮಾರು ಇಬ್ಬರು ಚಾಕು ಮತ್ತು ಚೂರಿಗೆ ತುತ್ತಾಗಿ ಪ್ರಾಣ ಬಿಟ್ಟಿದ್ದಾರೆ ಇದರಲ್ಲಿ ಒಬ್ಬರು ಮುಸ್ಲಿಂ ಜನಾಂಗಕ್ಕೆ ಸೇರಿದವರು ಮತ್ತೊಬ್ಬರು ಹಿಂದೂ ಜನಾಂಗಕ್ಕೆ ಸೇರಿದವರು. ಮತ್ತೆ ಅಲ್ಲಲ್ಲಿ ಒಂದು ತಪ್ಪು ತಿಳಿವಳಿಕೆ ಅಥವಾ ಸುಳ್ಳು ಸುದ್ದಿ ಹಬ್ಬಿ ಅಲ್ಲಲ್ಲಿ ಸ್ವಲ್ಪಪಟ್ಟಿಗೆ ಕೋಮುವಾರು ಗಲಭೆಗಳು ಕೂಡ ನಡೆದಿವೆ. ಈ ಘಟನೆಗೆ ಸ್ವಲ್ಪ ಬಣ್ಣ ಕಟ್ಟಿ ಆ ರೀತಿಯಾಗಿದೆಯೆಂದು ಅಧಿಕಾರಿಗಳು ತಿಳಿಸಿದಾಗ ಅಲ್ಲಿ ಕೂಡ ಪರಿಸ್ಥಿತಿ ಶಾಂತಿಯುತವಾಗಿದೆ. ಆದರೆ ಕೆಟವೊಂದು ಸಂದರ್ಭದಲ್ಲಿ ಗಾಳಿ ಸುದ್ದಿಯಿಂದ ಕೂಡ ಇಂಥ ಪರಿಸ್ಥಿತಿಯುಂಟಾಗುತ್ತದೆ. ಯಾವುದೇ ರೀತಿಯ ಒಂದು ಘಟನೆ ನಡೆದಾಗ ಅದಕ್ಕೆ ಕೋಮುವಾರು ಬಣ್ಣ ಕಟ್ಟಿದರೆ ಅದರ ಪರಿಣಾಮ ಕಾಳ್ಗಿಚ್ಚಿನಂತೆ ಎಲ್ಲಾ ಕಡೆಗೆ ಹಬ್ಬಿ ದೊಡ್ಡದಾಗುವುದಕ್ಕೆ ಅವಕಾಶವಾಗುತ್ತದೆ. ಮತ್ತೆ ಒಂದು ಭಾಗದಲ್ಲಿ ತಮಿಳು ಮಾತನಾಡುವಂಥ ಜನರ ಪ್ರದೇಶಕ್ಕೆ ಹೋಗಿ ಅಲ್ಲಿ ಕೂಡ ಹಲ್ಲೆ ನಡೆದಿದೆ. ಆದರೆ ಆ ಪ್ರದೇಶಕ್ಕೆ ತಕ್ಷಣ ಅಧಿಕಾರಿಗಳು ಹೋಗಿ ನಿಮಗೆ